ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ನಿರ್ಧಾರ ಮಾಡುತ್ತದೆಂಬ ಬಗ್ಗೆ ಉತ್ತರ ಕೊಡಬೇಕೆಂದು ಬಯಸುತ್ತೇನೆ.

ಅಧ್ಯಕ್ಷರು:– ತಾವು ಅಣ್ಣಿಗೇರಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಕೇಳಿದ್ದೀರಿ. ನೀವು ಅದನ್ನು ಕೇಳಬೇಕು. ಅದನ್ನು ಕೇಳುವುದು ಬಿಟ್ಟು ಏನೋ ಕೇಳುತ್ತಿದ್ದೀರಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಹೌದು ಸಾರ್. ರಾಜ್ಯದ್ದು ಕೇಳುತ್ತಿದ್ದೇನೆ, ಅದನ್ನೂ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಆಯಿತು, ಮಂತ್ರಿಗಳೇ ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕಂದಾಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಕೋನರೆಡ್ಡಿಯವರು ನವಲಗುಂದ ಕ್ಷೇತ್ರದಲ್ಲಿ ಬರುವ ಅಣ್ಣಿಗೇರಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಈ ವಿಷಯವನ್ನು ಮಾನ್ಯ ಕಂದಾಯ ಸಚಿವರಿಗೆ ರವಾನೆ ಮಾಡುತ್ತೇನೆ. ಈ ಬಗ್ಗೆ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ok, ಮಾನ್ಯ ಹೆಚ್.ಡಿ. ರೇವಣ್ಣನವರು ಇಲ್ಲ. ಇನ್ನು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ಕೇಳಿ.

(ಮಾನ್ಯ ಹೆಚ್.ಡಿ. ರೇವಣ್ಣನವರು ಸಭೆಯಲ್ಲಿ ಹಾಜರಿರಲಿಲ್ಲ)

ಇ) ವಿಷಯ: ಅಂಕೋಲದ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಆರ್.ಎನ್. ನಾಯಕ ಇವರ ಹತ್ಯೆಯ ಕುರಿತಂತೆ ತನಿಖೆಯು ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ–ಸಿದ್ದಾಪುರ):– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ಗೃಹ ಸಚಿವರಲ್ಲಿ ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ನಮ್ಮ ಅಂಕೋಲ ತಾಲ್ಲೂಕಿನಲ್ಲಿ ಆರ್.ಎನ್. ನಾಯಕರವರ ಹತ್ಯೆಯಾಯಿತು. ಅವರನ್ನು ಹಾಡುಹಗಲೇ ಕೆಲವು ಭೂಗತ ಶಕ್ತಿಗಳು ಗುಂಡಿಟ್ಟು ಸಾಯಿಸಿದರು.

ಅಧ್ಯಕ್ಷರು:– ತಾವು ತನಿಖೆಯು ವಿಳಂಬವಾಗುತ್ತಿರುವ ಬಗ್ಗೆ ಕೇಳಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಿ.ಒ.ಡಿ. ತನಿಖೆಯಾಗಬೇಕೆಂದು ಕೊಟ್ಟಿದ್ದೇನೆ. ನಾನು ಈ ವಿಷಯವಾಗಿ ಸಿ.ಒ.ಡಿ. ತನಿಖೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಮಾನ್ಯ ಗೃಹ ಸಚಿವರನ್ನು ವಿನಂತಿಸಿಕೊಂಡಿದ್ದೇನೆ. ಇದು ಸಿ.ಒ.ಡಿ. ತನಿಖೆಯಾಗದ ಹೊರತು, ಇದರ ಮೂಲ ಸಿಗುವುದಿಲ್ಲ. ಈಗ ಹೊಡೆದಿರುವ ನಾಲ್ಕು ಜನರನ್ನು ಬಂಧಿಸಿದ್ದಾರೆ, ಅವರಲ್ಲಿ ಒಬ್ಬನು ಸತ್ತು ಹೋಗಿದ್ದು, ಇನ್ನು ನಾಲ್ಕು ಜನರನ್ನು ಬಂಧಿಸಿದ್ದಾರೆ. ಇದೆಲ್ಲಾ ಆಗಿದೆ. ಆದರೆ ಇದಕ್ಕೆಲ್ಲಾ ಮೂಲ ಕಾರಣರು ಯಾರು? ಅವರಿಗೆ ಆರ್.ಎನ್. ನಾಯಕರವರನ್ನು ಹೊಡೆಯಬೇಕೆಂದು ಹೇಳಿದವರು ಯಾರು? ಅವರನ್ನು ಹೊಡೆಯುವುದಕ್ಕೆ ಪ್ಲಾನ್ ಮಾಡಿದವರು ಯಾರು? ಭೂಗತರನ್ನು ಹಿಡಿಯಬೇಕೆಂದರೆ interpolನ ಅಗತ್ಯತೆ ಇದೆ, District Policeನವರಿಂದ ಆಗುವುದಿಲ್ಲ.

ಅಧ್ಯಕ್ಷರು:– ಚರ್ಚೆಗೆ ಅವಕಾಶವಿಲ್ಲ, ದಯವಿಟ್ಟು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇದನ್ನು ಸರ್ಕಾರ ಸಿ.ಒ.ಡಿ. ತನಿಖೆಗೆ ಒಪ್ಪಿಸಲಿ, ಅದರಿಂದ ಮೂಲ ಯಾರು ಅಪರಾಧಿಗಳಿದ್ದಾರೆ. ಅವರನ್ನು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು:– ಯಾವ ಮಂತ್ರಿಗಳು ಉತ್ತರ ಹೇಳುತ್ತೀರಾ, ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ತಂದಿರುವಂಥ ಪ್ರಶ್ನೆ ಸರ್ಕಾರದ ಗಮನದಲ್ಲಿದೆ. ಇದರ ಬಗ್ಗೆ ಏನು ಕ್ರಮವಾಗಿಲ್ಲವೆಂಬ ಪ್ರಶ್ನೆ ಇಲ್ಲ, ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ 7 ಜನರನ್ನು arrest ಮಾಡಲಾಗಿದೆ. ಅವರಲ್ಲಿ ಬನ್ನೆಂಜೆ ರಾಜ ಎನ್ನುವವನು abscond ಆಗಿದ್ದಾನೆ, ಅವನು ಫಾರಿನ್‌ನಲ್ಲಿದ್ದಾನೆಂಬ ಗುಮಾನಿ ಇದೆ. ಈ ವಿಷಯವಾಗಿ ಕೇಂದ್ರಸರ್ಕಾರದವರ ಜೊತೆಯಲ್ಲಿ ಸಂಪರ್ಕವನ್ನು ಹೊಂದಿ ಅವನನ್ನು ಕೂಡ ಬಂಧಿಸುವುದಕ್ಕೂ ಕ್ರಮ ಜರುಗಿಸಲಾಗುತ್ತಿದೆ, IGP ನೇತೃತ್ವದ ತಂಡ ಏನು ಇದೆ, ಇದು ಅತೀ ಬೇಗ ಕಾರ್ಯೋನ್ಮುಖರಾಗಿ 7 ಜನರನ್ನೂ ಕೂಡ ಬಂಧಿಸಿದ್ದಾರೆ. Karnataka Control of Organized Crime Act, 2000 ಅದರ ಅಡಿಯಲ್ಲಿ ಕೂಡ ಪ್ರಕರಣವನ್ನು ದಾಖಲಿಸಿದೆ. ಏಳು ಜನ ಆರೋಪಿಗಳನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಿದೆ. ಆದ್ದರಿಂದ ಇದರಲ್ಲಿ ಕ್ರಮ ಆಗಿಲ್ಲ ಎನ್ನುವ ಪ್ರಶ್ನೆಯಿಲ್ಲ, ಕ್ರಮವಾಗಿದೆ.

ಶ್ರೀ ಜಗದೀಶ ಶೆಟ್ಟರ್:– ಕ್ರಮವಾಗಿದೆ ಎನ್ನುವುದು ಸರಿ. ಇದರ ಹಿನ್ನೆಲೆಯಲ್ಲಿ ಭೂಗತ ವ್ಯಕ್ತಿಗಳಿದ್ದಾರೆ. ಅದಕ್ಕಾಗಿ ಸಿ.ಓ.ಡಿ. ತನಿಖೆಯಾದರೆ ಉತ್ತಮ ಎನ್ನುವುದು ನಮ್ಮ ಅಭಿಪ್ರಾಯ. ನಾವು ಸಿ.ಬಿ.ಐ. ತನಿಖೆಯನ್ನು ಕೇಳುತ್ತಿಲ್ಲ, ಸಿ.ಓ.ಡಿ.ಗಾದರೂ ಕೊಡಿ. ಇದರಲ್ಲಿ ಬೇರೆಬೇರೆ ರಾಜ್ಯಗಳಲ್ಲಿ ಇರುವಂಥವರು ಇದ್ದಾರೆ, ಆ ದೃಷ್ಟಿಯಿಂದ ಹೇಳುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ:– ಸಿ.ಓ.ಡಿ. ತನಿಖೆಯಾಗಬೇಕು ಎನ್ನುವ ಒತ್ತಾಯವನ್ನು ತಾವೇನು ಮಾಡುತ್ತಿದ್ದೀರಿ, ಅದನ್ನು ಗೃಹ ಸಚಿವರ ಗಮನಕ್ಕೆ ತರುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮುಖ್ಯಮಂತ್ರಿಗಳು ಇದನ್ನು ತಾತ್ವಿಕವಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೂ ಇಲ್ಲಿ ಇದ್ದಾರೆ. ನಿಮಗೂ ಎಲ್ಲ ವಿಷಯಗಳು ಗೊತ್ತಿದೆ. ಈ

ವಿಷಯದಲ್ಲಿ ಅಪರಾಧದ ಮೂಲಕ್ಕೆ ಹೋಗಬೇಕು ಎಂದಾದರೆ ಮತ್ತು ಇದಕ್ಕೆ ಇಂಟರ್‌ಪೋಲ್‌ನ ಸಹಾಯದ ಅಗತ್ಯತೆ ಇರುವ ಹಿನ್ನೆಲೆಯಲ್ಲಿ ಇದನ್ನು ಸಿ.ಓ.ಡಿ.ಗೆ ಕೊಡಬೇಕು ಎಂದು ಆಗ್ರಹ ಮಾಡುತ್ತಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳ ಗ್ಯಾಲರಿ ಹೇಗಿದೆ ಎಂದು ನೋಡಿ. ಅಧಿಕಾರಿಗಳನ್ನು ಬರುವುದಕ್ಕೆ ಹೇಳಿ.

ಅಧ್ಯಕ್ಷರು:– ನೋಡಿ, ಅಧಿಕಾರಿಗಳನ್ನು ಬರುವುದಕ್ಕೆ ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಯಾವುದಕ್ಕೂ ಸರ್ಕಾರದಿಂದ ಉತ್ತರವಿಲ್ಲ ಎಂದರೆ ಹೇಗೆ? ಸಚಿವರು ಇಲ್ಲವೆಂದರೆ ನಾವು ಯಾರನ್ನು ಕೇಳುವುದು? ಕಂದಾಯ ಸಚಿವರಿಗೆ ರವಾನೆ ಮಾಡಲಾಗಿದೆ ಎಂದರೆ ಅದರ ಅರ್ಥವೇನು?

ಶ್ರೀ ಟಿ.ಬಿ. ಜಯಚಂದ್ರ:– ಇಲ್ಲಿ ಕುಳಿತಿರುವಂಥ ಸಚಿವರಾದ ನಾವು ಸಮರ್ಥರಿದ್ದೇವೆ, ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ನೀವು ಹೇಳುವಂಥ ಎಲ್ಲ ವಿಚಾರಗಳನ್ನು ಕೂಡ ನಾವು ಕೇಳುವುದಕ್ಕೆ ತಯಾರಿದ್ದೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ನೀವು ಅವರ ಪರವಾಗಿ ಉತ್ತರ ಕೊಡಿ.

ಶ್ರೀ ವೈ.ಎಸ್.ವಿ. ದತ್ತಾ:– ಜಯಚಂದ್ರರವರೇ ಒಂದು ನಿಮಿಷ, ...

ಅಧ್ಯಕ್ಷರು:– ದತ್ತಾರವರೇ, ಸುಮ್ಮನೆ ಕೆಲಸಕ್ಕೆ ಬಾರದ ಮಾತುಗಳು ಬೇಡ. ದಯವಿಟ್ಟು ಸುಮ್ಮನಿರಿ.

ಶ್ರೀ ವೈ.ಎಸ್.ವಿ. ದತ್ತಾ:– ನಾವು ನೀವು ಮಾತನಾಡುವುದು ಅಧಿಕಾರಿಗಳಿಗೆ ನಾಟಬೇಕು. ಅಧಿಕಾರಿಗಳಿಗೆ ನಾಟಿದರೇ ಕೆಲಸವಾಗುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಸಹಾಯ ಮಾಡಲು ಅಧಿಕಾರಿಗಳು ಬರುತ್ತಾರೆ.

ಅಧ್ಯಕ್ಷರು:– ದತ್ತಾರವರೇ, ಸರ್ಕಾರ ಇಲ್ಲಿದೆ, ಎಲ್ಲದಕ್ಕೂ ಅವರು ಜವಾಬ್ದಾರರು.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಅವರೇ ಜವಾಬ್ದಾರರು ಎನ್ನುವುದು ಸರಿ. ಆದರೆ ಕಂದಾಯ ಸಚಿವರಿಗೆ ರವಾನೆ ಮಾಡಲಾಗಿದೆ ಎಂದು ಹೇಳುತ್ತಾರೆ. ಹಾಗೆ ಕೊಡುವುದಕ್ಕೆ ಇದೇನು ಪತ್ರವೇ? ನಾವು ಸದನದಲ್ಲಿ ಉತ್ತರ ಬಯಸುತ್ತೇವೆ.

ಅಧ್ಯಕ್ಷರು:– ತಾವು ಹೇಳುತ್ತಿರುವುದು ಯಾವ ವಿಚಾರದಲ್ಲಿ?

ಶ್ರೀ ಎನ್.ಹೆಚ್. ಕೋನರೆಡ್ಡಿ:– ತಾಲ್ಲೂಕು ರಚನೆ ಬಗ್ಗೆ ನಾನು ಕೇಳಿದ್ದೇನೆ. ಅದಕ್ಕೆ ಸಂಬಂಧಪಟ್ಟ ಸಚಿವರ ಪರವಾಗಿ ಅವರು ಉತ್ತರ ಹೇಳಬೇಕಲ್ಲವೇ? ರವಾನೆ ಮಾಡುವುದು ಎಂದರೆ ಏನು ಅರ್ಥ?

ಅಧ್ಯಕ್ಷರು:– ರವಾನೆ ಮಾಡುವುದು ಎಂದರೆ ಕಳುಹಿಸಿಕೊಡುತ್ತೇವೆ ಎಂದು ಅರ್ಥ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಅವರ ಪರವಾಗಿ ತಾವು ಉತ್ತರ ಕೊಡಿಸಿ.

ಅಧ್ಯಕ್ಷರು:– ಅದರ ಬಗ್ಗೆ ಚರ್ಚೆ ಬೇಡ. ಅವರು ಹೇಳಿದ್ದಾರೆ. ಕೃಷ್ಣಾರೆಡ್ಡಿಯವರೇ ನೀವು ಹೇಳಿ.

4) ವಿಷಯ:– ಕೈಗಾರಿಕಾಭಿವೃದ್ಧಿ ಉದ್ದೇಶಕ್ಕಾಗಿ ವಶಪಡಿಸಿಕೊಂಡಿರುವ ರೈತರ ಜಮೀನಿಗೆ ಹೆಚ್ಚಿನ ಪರಿಹಾರ ನೀಡುವ ಬಗ್ಗೆ ಮತ್ತು ಗುತ್ತಿಗೆ ನೀಡಿರುವ ಗೋಮಾಳ ಜಮೀನನ್ನು ಅವಧಿಪೂರ್ಣಗೊಳ್ಳುವವರೆಗೆ ಮುಂದುವರೆಸುವ ಬಗ್ಗೆ.

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ):– ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿ ಮಸ್ತೇನಹಳ್ಳಿ ಎನ್ನುವ ಗ್ರಾಮದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿಯ ಉದ್ದೇಶಕ್ಕಾಗಿ 519 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಂಡಿರುತ್ತಾರೆ. ಅದರಲ್ಲಿ 258 ಎಕರೆ ಜಮೀನು ರೈತರ